ಈ) ಉತ್ತರ ಕರ್ನಾಟಕದ ಒಂದು ಸ್ಥಳದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಸರ್ಕಾರ ಇಚ್ಛೆ ಹೊಂದಿದ್ದು ಈ ವಿಷಯ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದೆ.

ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ

15 (196) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನಗರಸಭೆಗಳ ಸಂಖ್ಯೆ ಎಷ್ಟು;

ಆ) ಈ ನಗರಸಭೆಗಳಲ್ಲಿ ಹಾಲಿ ನೀರು ಪೂರೈಕೆಗೆ ಹಾಗೂ ಒಳಚರಂಡಿ ವ್ಯವಸ್ಥೆ ಯೋಜನೆ ಕಾರ್ಯ ಹಮ್ಮಿ ಕೊಳ್ಳಲಾಗಿದೆಯೇ;

ಇ) ಯಾವಾಗ ಅನುಷ್ಠಾನಗೊಳಿಸಲಗುತ್ತದೆ; ಇದಕ್ಕೆ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು;

ಈ) ಅನುಷ್ಠಾನಗೊಳಿಸಿದ್ದಲ್ಲಿ ಕಾಮಗಾರಿ ಯಾವ ಹಂತದಲ್ಲಿದೆ; ಯಾವಾಗ ಮುಗಿಸಲಾಗುತ್ತದೆ;

ಉ) ಈ ನಗರಗಳಿಗೆ ಹಾಲಿ ಕುಡಿಯುವ ನೀರಿನ ಸೌಲಭ್ಯವನ್ನು ಯಾವ ಯೋಜನೆಯಡಿಯಲ್ಲಿ ರೂಪಿಸಲಾಗಿದೆ, ನೀರು ಪೂರೈಕೆ ಸಮರ್ಪಕವಾಗಿದೆಯೇ, ನೀರಿನ ಕೊರತೆ ಇರುವ ಜಾಗಗಳನ್ನು ಗುರುತಿಸಲಾಗಿದೆಯೇ, ಅವು ಯಾವುವು; ಈ ಸ್ಥಳಗಳಿಗೆ ಯಾವ ಪರಿಹಾರ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ನಗರಾಭಿವೃದ್ಧಿ ಸಚಿವರು) :

ಅ) ಬಿಜಾಪುರ ಜಿಲ್ಲೆ – 1

ಬಾಗಲಕೋಟೆ ಜಿಲ್ಲೆ –2

ಆ) ಹೌದು.

ಇ) ಆದಷ್ಟು ಶೀಘ್ರದಲ್ಲಿ, ಸುಮಾರು 55.00 ಕೋಟಿ ರೂಗಳು.

ಈ) ಇನ್ನೂ ಅನುಷ್ಠಾನಗೊಳಿಸಿರುವುದಿಲ್ಲ

ಉ) ಹಾಲಿ, ಕೃಷ್ಣಾ ನದಿಯಿಂದ ನೀರು ಸರಬರಾಜು ಯೋಜನೆಯನ್ನು ಸ್ಥಳೀಯ ಸಂಸ್ಥೆಗಳ ವಂತಿಗೆ, ಹಣಕಾಸು ಸಂಸ್ಥೆಗಳ ಸಾಲ ಮತ್ತು ಸರ್ಕಾರದ ಸಹಾಯದಲ್ಲಿ ಜಾರಿಗೊಳಿಸಲಾಗಿದೆ. ನೀರು ಸರಬರಾಜು ಸಮರ್ಪಕವಾಗಿದೆ. ಆದಾಗ್ಯೂ ಇನ್ನೂ ಉತ್ತಮವಾಗಿ ನೀರು ಪೂರೈಸಲು ಎ.ಡಿ.ಬಿ. ನೆರವಿನಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ನಾಗಮಂಗಲ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ ಬರ ಪರಿಹಾರ ಯೋಜನೆಗಳ ಬಗ್ಗೆ

18 (26) : ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕು ಸಣ್ಣ ನೀರಾವರಿ ಇಲಾಖೆಯಿಂದ ಬರ ಪರಿಹಾರ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಎಷ್ಟು ಕಾಮಗಾರಿಗಳನ್ನು ಪೂರ್ಯೆಸಲಾಗಿದೆ; ಹಾಗೂ ಬಾಕಿ ಇರುವ ಕಾಮಗಾರಿಗಳು ಎಷ್ಟು; ಈ ಕಾಮಗಾರಿಗೆ ಎಷ್ಟು ಮೊತ್ತ ವಿನಿಯೋಗಿಸಲಾಗಿದೆ; ಮತ್ತು ಬಾಕಿ ಇರುವ ಮೊತ್ತ ಎಷ್ಟು;

ಆ) ನಾಗಮಂಗಲ ತಾಲ್ಲೂಕಿನಲ್ಲಿ ರೈತ ಕಾಯಕ ಯೋಜನೆ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ; ಮತ್ತು ಖರ್ಚು ಆಗಿರುವ ಹಣವೆಷ್ಟು; ಹಾಗೂ